ಸಾಕ್ಷಿ ಯನ್ನು ದಿಃ 07.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ದೂರುದಾರರನ್ನು ನಾನು 12 ವರ್ಷದಿಂದ ನೋಡಿದ್ದೇನೆ. ಅವರು ಈಗ ಯಾವ ವ್ಯವಹಾರ ಮಾಡುತ್ತಾರೆ ಗೊತ್ತಿಲ್ಲ, ಆಗ ಚೀಟಿ ವ್ಯವಹಾರ ಮಾಡುತ್ತಿದ್ದರು.
2. ಅವರು 12 ವರ್ಷದ ಹಿಂದೆ ಚೀಟಿ ವ್ಯವಹಾರ ಮಾಡುತ್ತಿದ್ದರು. ಅವರು ಸೋಡಿ ಚೀಟಿ ವ್ಯವಹಾರ ಮಾಡುತ್ತಿದ್ದರು. ಅವರು ಚೀಟಿ ವ್ಯವಹಾರ ಮಾಡುವ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ, ನೋಡಿದ್ದೇನೆ, ನ್ಯಾಯಾಲಯಕ್ಕೆ ನೀಡಿಲ್ಲ.
3. ಒಂದು ಚೀಟಿ ಮಾಡಲು 20 ಜನರು ಸೇರಿಸಿಕೊಳ್ಳುತ್ತಿದ್ದರು. ಅವರ ಹೆಸರುಗಳು ಸ್ವಲ್ಪ ಜನರದ್ದು ಗೊತ್ತು. ಬೇರೆಯವರದ್ದು ನೆನಪಿಲ್ಲ.
4. ನಾನು 4 ನೇ ಚೀಟಿ ತೆಗೆದುಕೊಂಡಿದ್ದೆ. ಆ ಬಗ್ಗೆ ರಶೀದಿ ಕೊಟ್ಟಿರುವುದಿಲ್ಲ.
5. ನಿಪಿ - 1ರ ಚೆಕ್ ಹಾಗೂ ಅದರ ಮೇಲಿರುವ ಸಹಿ ನನ್ನದು. ಅದರ ಮೇಲಿರುವ ಬರವಣಿಗೆ ನನ್ನದಲ್ಲ.
6. ನಾನು ನೋಟೀಸನ್ನು ಸ್ವೀಕರಿಸಿದ್ದೇನೆ. ಅದಕ್ಕೆ ಪ್ರತ್ಯುತ್ತರ ನೀಡಲು ತೊಂದರೆ ಇತ್ತಾ ಎಂದರೆ, ಅವರನ್ನೇ ಹೋಗಿ ಕೇಳಿದ್ದೆ. ಆಗ ಅವರು ಬೇರೆಯವರ ಬದಲಾಗಿ ನಿಮಗೆ ಬಂದಿದೆ ಎಂದು ಹೇಳಿ, ನನಗೆ ಕಳಿಸಿದ ನೋಟೀಸನ್ನು ಹರಿದು ಹಾಕಿದರು.
7. ಈ ಪ್ರಕರಣ ಹಾಕಿದ ನಂತರ ಪುನಃ ಹೋಗಿ ಕೇಳಿದ್ದೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ